**ಪಿಡಬ್ಲು-1**

**ಸಾಕ್ಷಿಯನ್ನು ದಿನಾಂಕ 09-04-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಸತೀಶ ಭಟ್ಟರಿಂದಃ**

ನಿಪಿ-6 ರ ರೀತ್ಯಾ ನಾನು ಅರ್ಬನ್ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿದ್ದೆ. ಆರೋಪಿಗೆ ಜನವರಿ-2022 ರಲ್ಲಿ 3 ಕಂತುಗಳಲ್ಲಿ ಹಣವನ್ನು ಕೊಟ್ಟಿದ್ದೇನೆ. ನಾನು ಅರ್ಬನ್ ಬ್ಯಾಂಕನಲ್ಲಿ ಜಮೀನು ಖರೀದಿಸುವ ಉದ್ದೇಶಕ್ಕೆ ಸಾಲ ಪಡೆದುಕೊಂಡಿದ್ದೆ. ಆದರೆ ಜಮೀನು ಖರೀದಿಸಿಲ್ಲ. ನಾನು ಬ್ಯಾಂಕನಲ್ಲಿ ಸಾಲ ಮಾಡುವ ಸಮಯಕ್ಕೆ ಎಪಿಎಲ್ ಕಾರ್ಡ ಇತ್ತೋ ಬಿಪಿಎಲ್ ಕಾರ್ಡ ಇತ್ತೋ ನೆನಪಿಲ್ಲ. ಅರ್ಬನ ಬ್ಯಾಂಕಿಗೆ ಪ್ರತಿ ತಿಂಗಳು ಬಡ್ಡಿಯನ್ನು ಕಟ್ಟುತ್ತಿದ್ದೆ. ಆರೋಪಿಯ ಬಳಿ ನಾನು ಬಡ್ಡಿ ತೆಗೆದುಕೊಳ್ಳುತ್ತಿರಲಿಲ್ಲ. ನಿಪಿ-6 ರ ಸಾಲಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಅರ್ಬನ್ ಬ್ಯಾಂಕಿಗೆ ಸಾಲ ಕಟ್ಟಬೇಕು ಅನ್ನುವ ವಿಚಾರವನ್ನು ಆರೋಪಿಗೆ ಲಿಖಿತವಾಗಿ ತಿಳಿಸಿಲ್ಲ. ಸಾಲ ಮಾಡಿದ ಹಣವನ್ನು ಆರೋಪಿಗೆ ಕೊಟ್ಟಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕೈಯಿಂದ ಬ್ಯಾಂಕಿಗೆ ಬಡ್ಡಿ ಕಟ್ಟಿ ಅದರ ಹಣವನ್ನು ಬೇರೆಯವರಿಗೆ ಬಡ್ಡಿ ಇಲ್ಲದೇ ಜಗತ್ತಿನಲ್ಲಿ ಯಾರೂ ಕೊಡುವುದಿಲ್ಲ, ನೀವೂ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣವನ್ನು ಕೊಡದೇ ಇರುವುದರಿಂದ ನಿಪಿ-6 ಕ್ಕೂ ಆರೋಪಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**